ಮಾತನಾಡದಿದ್ದಾಗಲೂ ಅವರ ಸಂಬಂಧಕ್ಕೇನೂ ಸಮಸ್ಯೆಯಿಲ್ಲ. ಅಸಂಬಂಧ ಎಂದಲ್ಲಿ ವಿರೋಧಾಭಾಸವಲ್ಲ. ಸಂಬಂಧದ ನಿರೀಕ್ಷಿತ ಕ್ರಿಯೆ ಪ್ರತಿಕ್ರಿಯೆಗಳಿಗೆ ಪೂರಕವಾಗಿಲ್ಲದ ಒಂದು ಸ್ಥಿತಿ ಎಂದು ಭಾವಿಸಬಹುದೇನೋ. ಅಥವ ಸಂಬಂಧದ ಆದರ್ಶದಿಂದ ಒಂದು ಮೆಟ್ಟಿಲು ಕೆಳಗಿಳಿದು ವಾಸ್ತವ ನೆಲೆಯಿಂದ ಯೋಚಿಸುವುದು. ಅದು ಕೆಲವೊಮ್ಮೆ ಅಹಿತವೂ ಆಗಿರಬಹುದು. ಕಾಲಾನಂತರ ಪೂರಕವಾಗಿ ವರ್ತಿಸಬಹುದು. ಆದರೆ, ಇಂಥ ವಾಸ್ತವಿಕ, ವ್ಯಾವಹಾರಿಕ ಅಂಶಗಳೇ ಪ್ರಧಾನವಾಗಿಬಿಟ್ಟಲ್ಲಿ ತೊಡಕಾಗಬಹುದು. ಸಂಬಂಧವೊಂದು ತನ್ನ ಅಸಂಬಂಧ ಸೂಕ್ಷ್ಮಗಳನ್ನು ಹೇಗೆ ನಿಭಾಯಿಸುತ್ತದೆ ಮತ್ತು ಅದನ್ನು ಹೇಗೆ ತನ್ನ ಹಿತಕ್ಕೆ ಹತ್ತಿರವಾಗಿಸಿಕೊಳ್ಳುತ್ತದೆ ಎಂಬುದು ಮುಖ್ಯ. ಇದನ್ನು ಸಂಬಂಧ ಸಮಾಸ ಎಂದು ಕರೆಯಬಹುದು. ಅಂದರೆ ಅರ್ಥಾನುಸಾರಿಯಾಗಿ ವಿವಿಧ ಪದಗಳು ಸೇರಿ ಒಂದಾಗುವುದು. ಆದರೆ, ದೋಷಯುಕ್ತ ಸಮಾಸಗಳೂ ಇರುತ್ತವೆ. ಕನ್ನಡ ಪದದೊಡನೆ ಸಂಸ್ಕೃತ ಪದ ಸೇರಿದಾಗ ಸಮಾಸವಾಗುವುದಿಲ್ಲ. ಹಾಗೆ ಅಸಂಬಂಧವನ್ನು ವಿವೇಚಿಸುವಾಗ ದೋಷದ ಎಚ್ಚರವೂ ಇರಬೇಕು.

'ಬೆಳಕು ಅಲೆಯೂ ಹೌದು, ಕಣವೂ ಹೌದು' ಎಂಬ ಐನ್‌ಸ್ಟೀನ್ ಪ್ರತಿಪಾದಿಸಿದ ಸತ್ಯವನ್ನೂ ಇಲ್ಲಿಗೆ ಅನ್ವಯಿಸಬಹುದೇನೋ. ಯಾವಾಗ ಅಲೆ ಯಾವಾಗ ಕಣ ಅವುಗಳ ಸಮೀಕರಣ ಫಲಿತದ ಗುಣ ದೋಷಗಳು ಬೇರೊಂದೇ ವಿಚಾರ. ಆದರೆ, ಈ ಸರಳ ತತ್ತ್ವವನ್ನು ಯಶವಂತ ಚಿತ್ತಾಲರ ಕತೆಯೊಂದು ಸಮರ್ಥವಾಗಿ ದುಡಿಸಿಕೊಂಡಿದೆ. ಅವರ 'ಓಡಿಹೋದಾ ಮುಟ್ಟಿಬಂದಾ' ಸಂಕಲನದ ಕತೆ 'ತಪರಾಕಿ'ಯು ನಡೆದ ಅಥವ ನಡೆಯದ ಲೈಂಗಿಕ ಸಂಬಂಧವೊಂದನ್ನು ಮಾತಿನ ವಿವರಗಳ ಮೂಲಕ ವಿಶ್ಲೇಷಣೆಗೊಳಪಡಿಸುತ್ತದೆ. ಒಬ್ಬ ಮನುಷ್ಯ ಇಲ್ಲವೇ ವಾಸ್ತವ ಸತ್ಯವೊಂದು ಒಂದೇ ಕಾಲಕ್ಕೆ ಒಳ್ಳೆಯದು ಮತ್ತು ಕೆಟ್ಟದೂ ಆಗಿರಲಿಕ್ಕೆ ಸಾಧ್ಯವಿದೆ ಎಂಬುದು ಕತೆಯ ಮುಖ್ಯ ದ್ರವ್ಯ. ಅಂದಮೇಲೆ ಸಂಬಂಧದ ಅಲೆ ಮತ್ತು ಕಣಗಳ ಮೂಲಕ ನಾವು ನೋಡುವುದು ಬಹಳವಿದೆ ಎಂದಾಯಿತು. ಆದರೆ, ಆ ಎರಡರ ಮುಂದೆ ನಾವೊಬ್ಬರೇ ಇರುತ್ತೇವೆ ಎಂಬುದು ಒಂದು ಸಂದಿಗ್ಧ.

ಇಂತಹ ಸಂದಿಗ್ಧಗಳನ್ನು ನಿಭಾಯಿಸುವಾಗ ನಾವು ಸಹಜವಾಗಿ ಇರಲು ಸಾಧ್ಯವಿದೆಯೇ? ಯಾರನ್ನೋ ಅನುಕರಿಸುತ್ತ ಯಾವುದೋ ಉದ್ದೇಶವಿಟ್ಟು ಯಾವುದೋ ಪರಿಣಾಮದ ನಿರೀಕ್ಷೆಯಲ್ಲಿ ಸಂಬಂಧಗಳನ್ನು ನಟಿಸಿಬಿಡುತ್ತೇವೆಯೇ? ಇನ್ನೊಬ್ಬರಿಗೆ ತಿಳಿದಾಗಲೂ ನಮಗೆ ತಿಳಿಯದೇ ಹೋಗುವ ನಟಿಸುವಿಕೆ ನಮ್ಮನ್ನೂ ಮತ್ತು ಸಂಬಂಧವನ್ನು ಅಪವ್ಯಾಖ್ಯಾನಗೊಳಿಸುವ ಸಂಭವವಿದೆ. ಕೊನೆಯಲ್ಲಿ ಅದನ್ನು ಅರಿಯುವ ಗಳಿಗೆಯಲ್ಲಿ ಸಂಬಂಧ – ಅಸಂಬಂಧಗಳು ತಮ್ಮ ವೇಷಗಳನ್ನು ಪರಸ್ಪರ ಬದಲಾಯಿಸಿಕೊಳ್ಳುತ್ತವೆ. ನಾನು ನೋಡಿದ ಹಿರಿಯರೊಬ್ಬರು ತಮ್ಮ ಸಾವಿನ ಹಾಸಿಗೆಯಲ್ಲಿ ತಮ್ಮ ಮನೆತನಕ್ಕಾಗಿಯೇ ಜೀವ ಸವೆಸಿದ ತನ್ನದೇ ವಯಸ್ಸಿನ ಆಳು ಮಗನನ್ನು ತನ್ನ ಪಕ್ಕ ಕೂರಲು ಕರೆದರು. ಸಹಜವಾಗಿ ಅವನು ಹಿಂಜರಿದ. ಮತ್ತೆ ಕರೆದರು. ಅವನು ಆಗಲೂ ಸಿದ್ಧವಾಗಲಿಲ್ಲ. ಆಗ ಅವರು ಹೇಳಿದ್ದು, 'ನಾನು ನೀನು ಜೊತೆಯಲ್ಲೇ ಬೆಳೆದ್ವಿ, ಇಬ್ರೂ ಮುದುಕರಾದ್ವಿ, ಈಗ ನಾನು ಸಾಯ್ತಾ ಇದ್ದೀನಿ... ಆದರೆ ಒಂದೇ ವ್ಯತ್ಯಾಸ ನಾನು ನಿನ್ನ ಬಯ್ಯಬಹುದಿತ್ತು. ನೀನು ನನ್ನ ಬೈಯಕ್ಕಾಗ್ತಿರಲಿಲ್ಲ...' ಸಾಯುವ ಹಾಸಿಗೆ ಸಂಬಂಧಕ್ಕೆ ಹೊಸ ವ್ಯಾಖ್ಯೆ ನೀಡಬಹುದಾ? ಹೀಗೆ ಎಲ್ಲರೂ ಎಲ್ಲ ಸಂದರ್ಭದಲ್ಲೂ ನಟಿಸುವಿಕೆಯ ಮೌಲ್ಯ ನಿರ್ಣಯ ಮಾಡಲಾದೀತೇ? ಇದು ಒಂದು ತೆರನಾದ ವ್ಯಾಖ್ಯೆಯಾದರೆ ನಾನು ಮುಂದೆ ಕೊಡಲಿರುವ ಉದಾಹರಣೆಯು ನಮ್ಮನ್ನು ಇನ್ನೊಂದು ನೆಲೆಗೇ ಕೊಂಡೊಯ್ಯುತ್ತದೆ. ವಿವರಗಳು ಮರೆತಿವೆ. ಪತ್ರಿಕೆಯಲ್ಲಿ ಓದಿದ ನೆನಪಿನ ಆಧಾರದಿಂದ ಹೇಳುತ್ತಿರುವೆ. ಆಸ್ಟ್ರೇಲಿಯಾದ ಯುವತಿಯೊಬ್ಬಳು ತನ್ನ 17ನೇ ವಯಸ್ಸಿನಲ್ಲಿ ತನ್ನ ಗೆಳೆಯನಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ. ಅದರಿಂದ ಘಾಸಿಗೊಂಡ ಆಕೆ ನಂತರ ಲೈಂಗಿಕ ಶೋಷಣೆಯ ವಿರುದ್ಧ